ಅಲ್ಲ, ಏನಾಗಿದೆ ಎನ್ನತಕ್ಕದ್ದನ್ನು ಸರ್ಕಾರಕ್ಕೆ ವರದಿ ಮಾಡದೇ ಇರತಕ್ಕಂಥ ಅಧಿಕಾರಿಗಳು ಅಲ್ಲಿ ಇದ್ದಾರೆ. ವರದಿಯನ್ನು ತರಿಸಿಕೊಳ್ಳುತ್ತೇವೆಂದು ಹೇಳಿದ್ದೀರಿ. ಇದು ಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಎನ್ನುವಂತಹ ಉತ್ತರವನ್ನು ನಿಮ್ಮ ಸಮಾಜ ಕಲ್ಯಾಣ ಅಧಿಕಾರಿಗಳು ಕೊಟ್ಟರೆ ಇನ್ನು ಮಹಿಳೆಯರು ಅಥವಾ ಅಂಗನವಾಡಿಯ ಕಾರ್ಯಕರ್ತರು ಹೇಗೆ ಬದುಕುವುದಕ್ಕೆ ಆಗುತ್ತದೆ ತಾವು ಹೇಳಿ? ದೂರನ್ನು ಕೊಟ್ಟರೂ ಸಹಿತ ದೂರನ್ನು ತೆಗೆದುಕೊಳ್ಳಲಿಲ್ಲ ಎಂದು ವರದಿಯಾಗಿದೆ. ಅದು ಸುಳ್ಳು ಹೌದೋ ಅಲ್ಲವೋ ಎಂಬುದರ ಬಗ್ಗೆ ವರದಿಯನ್ನು ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸುವುದಕ್ಕೆ ಮೂರು ವಾರಗಳು ಬೇಕು ಅಂತ ಅಂದರೆ ಇನ್ನು ಮಹಿಳೆಯವರು ಹೇಗೆ ಬದುಕುವುದಕ್ಕೆ ಸಾಧ್ಯವಾಗುತ್ತದೆ? ಈ ರೀತಿ ಅಂಟ್ರಾಸಿಟಿಗಳು ನಡೆದರೆ ಯಾವ ರೀತಿ ಬದುಕುವುದಕ್ಕೆ ಆಗುತ್ತದೆ? ಸರ್ಕಾರ ಈ ರೀತಿ ನಿದ್ರೆ ಮಾಡುತ್ತಿದ್ದರೆ ಹೇಗೆ? ಪೋಲೀಸ್ ಅಧಿಕಾರಿಗಳು ಇನ್ನೂ ನಿದ್ರೆ ಮಾಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ನನಗೆ ಇವತ್ತು ಗೊತ್ತಾಗಿದೆ. ಮುಚ್ಚುಮರೆ ಇಲ್ಲದೆ ಸ್ಪಷ್ಟವಾದ ಉತ್ತರ ಹೇಳಬೇಕಾದರೆ ಮೂರು ವಾರಗಳ ಹಿಂದೆ ಈ ಘಟನೆಯಾದರೂ ಕೂಡ ಏತಕ್ಕೆ ಮುಚ್ಚಿಟ್ಟಿದ್ದಾರೆ ಎಂಬುದರ ಬಗ್ಗೆ ವರದಿಯನ್ನು ತರಿಸುತ್ತೇನೆ. ಯಾರೇ ಪೋಲೀಸ್ ಅಧಿಕಾರಿಗಳೇ ಇರಲಿ, ನಮ್ಮ ಅಧಿಕಾರಿಗಳೇ ಇರಲಿ, ಯಾರು ತಪ್ಪಿತಸ್ಥರು ಇದ್ದಾರೆ ಅವರ ಬಗ್ಗೆ ಸರ್ಕಾರ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತದೆ. ನಾವು ಯಾರನ್ನೂ ಸ್ಪೇರ್ ಮಾಡುವುದಿಲ್ಲ.

ಮೈಸೂರು ಸುತ್ತಮುತ್ತ ನಡೆಯಿತೆನ್ನಲಾದ ಸ್ಫೋಟ

ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) :- ಮಾನ್ಯ ಅಧ್ಯಕ್ಷರೇ, ನಿನ್ನೆ ಸುಮಾರು ಐದು ಗಂಟೆಯ ಸಮಯದಲ್ಲಿ ಮೈಸೂರು, ನಂಜನಗೂಡು ಮತ್ತು ಶ್ರೀರಂಗಪಟ್ಟಣದ ಸುತ್ತಮುತ್ತಲೂ ಭಾರಿ ಶಬ್ದ ಭೂಕಂಪದ ರೀತಿಯಲ್ಲಿ ಆಯಿತು. ಈ ಶಬ್ದದಿಂದ ಆದಂತಹ ಅನಾಹುತದಿಂದ ಇಡೀ ನಗರದಲ್ಲಿ ಜನತೆಯು ಭಯಭೀತರಾಗಿ ಓಡಿಬಂದಿದ್ದಾರೆ. ನಂಜನಗೂಡು ಮತ್ತು ಮೈಸೂರು ನಗರಗಳಲ್ಲಿ ಕಿಟಕಿಯ ಗಾಜುಗಳು ಒಡೆದು ಹೋಗಿದೆ ಮತ್ತು ವೈರ್‌ಮೆಷ್‌ಗಳು ಬೆಂಡಾಗಿವೆ. ವಾಹನಗಳನ್ನು ಓಡಿಸುವ ಚಾಲಕರು ವಾಹನಗಳಿಂದ ಇಳಿದು ಹೊರಗೆ ಓಡಿ ಹೋಗಿದ್ದಾರೆ. ಇದು ಭೂಕಂಪವೋ, ಇದು ಒಂದು ಆಸ್ಫೋಟವೋ, ಇದು ವಿದೇಶಿ ಕೈವಾಡವೋ ಅಥವಾ ಇದು ವಿಧ್ವಂಸಕ ಕೃತ್ಯವೋ ಎಂಬುದು ಗೊತ್ತಾಗುತ್ತಿಲ್ಲ. ಏಕೆಂದರೆ ಬೆಳಿಗ್ಗೆ ನನ್ನ ಕಚೇರಿಗೆ ಮೈಸೂರಿನಿಂದ ದೂರವಾಣಿ ಕರೆ ಬರುತ್ತಿದೆ. ಇವತ್ತು ಕೂಡ ಏನಾಗುತ್ತಿದೆ, ಏನಾಗಬಹುದು ಎಂಬ ಭಯ ಮೈಸೂರಿನಲ್ಲಿ ನಿರ್ಮಾಣವಾಗಿದೆ. ಒಂದು ಪತ್ರಿಕೆಯಲ್ಲಿ ಸ್ಫೋಟವೆಂದೂ ಮತ್ತೊಂದರಲ್ಲಿ ಇದು ಭೂಕಂಪವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಅಧಿಕಾರಿಗಳನ್ನು ಕೇಳಿದಾಗ ಇದು ಭೂಕಂಪವೇ ಅಥವಾ ಅಲ್ಲವೇ ಎಂಬುದು ಗೊತ್ತಾಗುತ್ತಿಲ್ಲ ಎಂದು ಹೇಳಿದರು. ಆದರೆ ನಾನು ಸರ್ಕಾರವನ್ನು ಕೇಳುತ್ತೇನೆ. ಇಲ್ಲಿ ಪರಿಸರ ಖಾತೆಯ ಮಂತ್ರಿಗಳು ಇದ್ದಾರೆ. ವಿಜ್ಞಾನ ಖಾತೆಯ ಮಂತ್ರಿಗಳು ಇದ್ದಾರೆ, ಶಬ್ದ, ನೀರು,ಗಾಳಿ, ಎಲ್ಲದಕ್ಕೂ ಇಲ್ಲಿ ಮಂತ್ರಿಗಳು ಇದ್ದಾರೆ. ಇವರು ನನಗೆ ಮಾಹಿತಿ ಕೊಡಬೇಕು. ಇಡೀ ನಗರದ ಜನತೆಯು ಭಯಭೀತರಾಗಿದ್ದಾರೆ. ಅವರಿಗೆ ಸರಿಯಾದಂತಹ ಮಾರ್ಗದರ್ಶನ ಕೊಡಬೇಕು, ಸಾಂತ್ವನ ಹೇಳುವಂತಹ ಜವಾಬ್ದಾರಿ ಸರ್ಕಾರದ್ದು. ಆದುದರಿಂದ ತಮ್ಮ ಮೂಲಕ ನಾನು ತಿಳಿಯಪಡಿಸುತ್ತೇನೆ. ಇದಕ್ಕೆ ಸ್ಪಷ್ಟವಾದ ಕಾರಣವೇನು; ಇದು ವಿದೇಶಿ ಕೈವಾಡವೇ, ಇದು ವಿಧ್ವಂಸಕ ಕೃತ್ಯವೇ ಇಲ್ಲ ಭೂಕಂಪವೇ ಎಂಬ ಬಗ್ಗೆ ನಮಗೆ ತಿಳುವಳಿಕೆ ಕೊಡಬೇಕೆಂದು ಮುಖ್ಯಮಂತ್ರಿಗಳನ್ನು ಹಾಗೂ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅಲ್ಲಿ ಜನರು ಗಾಭರಿಯಾಗಿದ್ದಾರೆ. ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು; ಶಾಂತಿ ವಾತಾವರಣವನ್ನು ನಿರ್ಮಾಣ ಮಾಡುವಂತಹ ಜವಬ್ದಾರಿ ಸರ್ಕಾರದ್ದು. ಈ ನಿಟ್ಟಿನಲ್ಲಿ ಸರ್ಕಾರ ಹೇಳಿಕೆಯನ್ನು

ಕೊಡಬೇಕು. ಸಂಬಂಧಪಟ್ಟಂತಹ ಮಂತ್ರಿಗಳಾದ ಹಿರಿಯರಾದಂಥ ಶ್ರೀ ಹಾಲಪ್ಪನವರು ಇದಕ್ಕೆ ತಕ್ಕ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) :- ಮಾನ್ಯ ಅಧ್ಯಕ್ಷರೇ, ನಿನ್ನೆ ಐದು ಘಂಟೆಗೆ ಭಾರಿ ಶಬ್ದದಿಂದ ಮೈಸೂರು ನಗರವೇ ತತ್ತರಿಸಿದೆ. ಇದು ಪ್ರಾರಂಭವಾಗಿದ್ದು ನಂಜನಗೂಡಿನಿಂದ. ಅಲ್ಲಿ ಏನಾಗಿದೆ ಎಂದರೆ ಟಾಟಾ ಕಂಪನಿಯವರಿಗೆ 400 ಎಕರೆ ಭೂಮಿಯನ್ನು ಲೀಸ್‌ಗೆ ಕೊಟ್ಟಿದ್ದಾರೆ. ಸುಮಾರು 100 ಅಡಿ ಆಳದಿಂದ ಗ್ರಾನೈಟ್ ಕಲ್ಲು, ಬಿಣಚಿನ ಕಲ್ಲು ತೆಗೆಯಲು ಬ್ಲಾಸ್ಟ್ ಮಾಡುತ್ತಿರುತ್ತಾರೆ. ಪ್ರತಿದಿನ ಭಾರಿ ಡೈನಮೈಟ್ ಇಟ್ಟು ಅದನ್ನು ಸಿಡಿಸುತ್ತಿದ್ದಾರೆ. ಮೈಸೂರಿನಲ್ಲಿ ಆಗಿರುವುದು ಭೂಕಂಪ ಅಲ್ಲ; ಅಲ್ಲಿ ಏನು ಬ್ಲಾಸ್ಟ್ ಮಾಡುತ್ತಿದ್ದಾರೆ, ಅದರಿಂದ ಭಾರಿ ಅನಾಹುತವಾಗುತ್ತಿದೆ ಎಂದು ಪತ್ರಿಕೆಗಳಲ್ಲಿ ಬರುತ್ತಿದೆ. ಪ್ರತಿದಿನ ಸಾವಿರಾರು ಬ್ಲಾಸ್ಟ್ ಮೆಟೀರಿಯಲ್ ಇಟ್ಟು ನೂರು ಅಡಿ ಕೆಳಗಡೆಯಿಂದ ಕಲ್ಲನ್ನು ತೆಗೆಯುತ್ತಾರೆ. ಇದರಿಂದ ಆ ಶಬ್ದ ಬರುತ್ತದೆ. ಇದು ಹೆಚ್ಚಿಗೆ ನಡೆಯುತ್ತಿದ. ಇದರ ಬಗ್ಗೆ ಸೂಕ್ತವಾದ ಪರಿಶೀಲನೆ ಮಾಡಿಸಿ, ಮತ್ತು 400 ಎಕರೆಗೆ ಏನು ಲೀಸ್ ಕೊಟ್ಟಿದ್ದಾರೆ ಅಲ್ಲಿ ಪ್ರತಿದಿನ ಬ್ಲಾಸ್ಟ್ ಮಾಡುವುದರಿಂದ ಇಂತಹ ಶಬ್ದ ಬರುತ್ತದೆ. ಇದರಿಂದ ಜನರು ಭಯಭೀತಗೊಂಡಿದ್ದಾರೆ. ಇದರ ಬಗ್ಗೆ ಯಾವ ಅಧಿಕಾರಿಗಳೂ ಸರಿಯಾಗಿ ಹೇಳುತ್ತಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಸಚಿವರಾಗಲೀ, ಗೃಹ ಇಲಾಖೆಯವರಾಗಲೀ ಏನೂ ಹೇಳುತ್ತಿಲ್ಲ; ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ. ಈ ವಿಚಾರವನ್ನು ಸಾರ್ವಜನಿಕರಿಗೆ ತಿಳಿಸದೇ ಇದ್ದರೆ ಅವರು ಪ್ರತಿದಿನ ಬಹಳ ಗಾಬರಿಯಿಂದ ಮೈಸೂರಿನಿಂದ ಬೆಂಗಳೂರಿಗೆ ಓಡಿ ಬರುವಂಥದ್ದು ಬಹಳವಾಗುತ್ತಿದೆ. ಇವತ್ತು ಮೈಸೂರಿನಿಂದ ಸುಮಾರು 100-200 ಪ್ರಯಾಣಿಕರು ಬೆಂಗಳೂರಿಗೆ ಬರುತ್ತಿದ್ದಾರೆ. ಮೈಸೂರಿನಲ್ಲಿ ಏನೋ ಹೆಚ್ಚು ಕಡಿಮೆಯಾಗುತ್ತಿದೆ ಎಂದು ಗಾಬರಿಯಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ಮಾನ್ಯ ಗೃಹ ಸಚಿವರಿಂದ ಹೇಳಿಕೆಯನ್ನು ಕೊಡಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೇ, ಇದು ಒಂದು ಬಗೆ ಭೂಕಂಪವೆಂದು ಪತ್ರಿಕೆಗಳಲ್ಲಿ ಬಂದಿದೆ. ಅನೇಕರು ನನಗೆ ಬೆಳಿಗ್ಗೆ ದೂರವಾಣಿಯ ಮೂಲಕ ಹೇಳಿದರು. ಕೆಲವು ಕಡೆ ಬಹಳ ನಡುಕ ಉಂಟಾಯಿತು; ಭೂಮಿ ನಡುಗಿತು ಎಂದು ಹೇಳಿದರು. ಇತ್ತೀಚಿನ ದಿನಗಳಲ್ಲಿ ಬಾಂಬ್ ಗಲಾಟೆ ಎಲ್ಲಾ ಕಡೆ ನಡೆಯುತ್ತಾ ಇದೆ. ನಮ್ಮಲ್ಲೂ ಸಹ ಪ್ರತಿ ಗಡಿಪ್ರದೇಶಗಳಲ್ಲಿ, ರಸ್ತೆ ರಸ್ತೆಗಳಲ್ಲಿ ಪೋಲೀಸ್‌ನವರು ಪ್ರತಿ ವಾಹನಗಳನ್ನು ತನಿಖೆ ಮಾಡುತ್ತಿದ್ದಾರೆ. ಇದರ ಕೊನೆ ಎಲ್ಲಿಯವರೆಗೆ ಹೋಗಿದೆ ಎಂದರೆ ಮೊನ್ನೆ ಶಾಸನ ಸಭೆ ನಡೆಯುವಾಗ ಐದೇ ಗಂಟೆಗೆ ಸದನವನ್ನು ಮುಂದೂಡಿದರು. ನಾವೇನು ತಿಳಿದುಕೊಂಡೆವು ಅಂದರೆ ಏನೋ ಕಾರ್ಯಕ್ರಮ ಮುಗಿಸಿದ್ದಾರೆ, ಇನ್ನೇನೂ ಸದನದಲ್ಲಿ ಕಾರ್ಯಕ್ರಮಗಳು ಇಲ್ಲವೆಂದು ಸ್ವಲ್ಪ ಯೋಚನೆ ಮಾಡಿ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೇ ಬಿಡಬೇಕೇ ಎಂದು ಹೇಳಿ ನಾವು ಪ್ರಸ್ತಾಪ ಮಾಡದೆ ಹೊರಗಡೆ ಹೋದೆವು. ಇದು ಇಷ್ಟಕ್ಕೆ ಉಳಿಯಬಹುದೆಂದು ತಿಳಿದುಕೊಂಡಿದ್ದೆವು. ಹೊರಗೆಡ ಬಾಗಿಲು ದಾಟುವುದರೊಳಗಾಗಿ ಇಡೀ ಪೋಲೀಸಿನವರು ವಿಧಾನಸೌಧದೊಳಗೆ ನಾಯಿಗಳನ್ನು ಕರೆದುಕೊಂಡು ಬಂದು ಎಲ್ಲರೂ ಹೊರಗಡೆ ಬನ್ನಿ ಎಂದು ಹೆದರಿಸಿ ಭಯಭೀತಿಯಿಂದ ಓಡಿಸುತ್ತಿದ್ದರು. ನಾವು ಇಂತಹ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಏಕೆ ಎನ್ನುವ ಪ್ರಶ್ನೆ ನಮಗೆ ಇದ್ದರೆ ಎರಡೂ ಸದನಗಳು 5 ಗಂಟೆಯವರೆಗೆ ಮುಂದುವರೆಯಿತು. ಆದರೆ ಹೊರಗಡೆ ಭಾರೀ ಭೀಕರವಾದಂತಹ ಪರಿಸ್ಥಿತಿ ನಿರ್ಮಾಣವಾಗಿ ಹೋಯಿತು. ಜನ ಒಂದುಕಡೆ ಓಡುತ್ತಿದ್ದಾರೆ, ಪೋಲೀಸ್‌ನವರು ನಾಯಿಗಳನ್ನು ವಿಧಾನ ಸೌಧದೊಳಗೆ ಬಿಡುತ್ತಿದ್ದಾರೆ. ಈ ಸದನಕ್ಕೆ ಬಾಂಬನ್ನು ಇಡುವಂಥ ವ್ಯವಸ್ಥೆ ನಡೆದಿತ್ತೇ? ಯಾರಾದರೂ ಹೇಳಿದ್ದರೇ? ಆ ರೀತಿ ಫೋನ್ ಮಾಡಿದ್ದರೇ ಎಂಬ ವಿಷಯ ಇದುವರೆಗೂ ಕೂಡ ಸದನದಲ್ಲಿ ಪ್ರಸ್ತಾಪಕ್ಕೆ ಬರಲಿಲ್ಲ. ಈ ವಿಷಯ ಪತ್ರಿಕೆಗಳಲೆಲ್ಲಾ ಬಂತು. ಆ ದಿನ ನಾವು 5 ಗಂಟೆಗೇ ಹೊರಗಡೆಗೆ ಹೋಗುವುದು

ಎಂದರೆ ನಮಗೆ ನಿಜವಾಗಲೂ ತುಂಬಾ ಆಶ್ಚರ್ಯವಾಯಿತು. ಯಾವ ದಿವಸನೂ ಸಹ ನಾವು 5 ಗಂಟೆಗೇ ಹೊರಗಡೆ ಹೋಗಿರಲಿಲ್ಲ.

ಅಧ್ಯಕ್ಷರು :- ಮಾನ್ಯ ವಾಟಾಳ್‌ರವರೇ, ನೀವು ಮೈಸೂರಿನ ವಿಷಯದ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗಾರಾಜ್ :- ಆ ವಿಷಯಕ್ಕೆ ಬರುತ್ತೇನೆ. ಇದರ ಬಗ್ಗೆನೂ ಸಹ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ಸದನಕ್ಕೆ ಬಾಂಬ್‌ನ್ನು ಇಡುತ್ತೇವೆ ಎಂಬ ಬೆದರಿಕೆ ಬಂದಿದೆ ಎನ್ನುವಂಥ ಸುದ್ದಿ ತಮಗೆ ಗೊತ್ತಾಗಿದ್ದರೆ ಅಥವಾ ಶಾಸನಸಭೆಗೆ ಮತ್ತು ವಿಧಾನಪರಿಷತ್ತಿಗೆ, ವಿಧಾನಸಭೆಗೆ ಬಂದಿದ್ದರೆ, ಅದು ಏನು ಬಂದಿತ್ತು, ಆ ವಿಚಾರ ಏನು ಎನ್ನುವುದನ್ನು ಸದನದ ಮುಂದೆ ಮಂಡಿಸಬೇಕು. ಆದರೆ ಈ ವಿಷಯ ಪತ್ರಿಕೆಗಳಲ್ಲೂ ಬಂದಿದೆ; ನಾವೇ ಹೊರಗಡೆ ಈ ದೃಶ್ಯ ನೋಡಿದ್ದೇವೆ; ಜನರನ್ನು ಓಡಿಸುತ್ತಿದ್ದರು ಆದರೆ ಆ ದಿನ 5 ಗಂಟೆಗೆ ಸದನವನ್ನು ಉಪಾಧ್ಯಕ್ಷರು ಮುಂದೂಡಿದರು. ಆಗ ನನಗೆ ಏಕೆ ಇವತ್ತು ಇದ್ದಕ್ಕಿದ್ದ ಹಾಗೆ ಸದನ ಮುಗಿಯಿತು ಎಂದು ಆನಿಸಿತು. ಆದರ ಹೊರಗಡೆ ನೋಡಿದರೆ ಎಲ್ಲೆಲ್ಲೂ ಗದ್ದಲ, ಜನರು ಭಯಭೀತಿಯಿಂದ ಓಡುತ್ತಿದ್ದಾರೆ. ನಮ್ಮ ವಿಧಾನ ಸೌಧಕ್ಕೆ ಇಂತಹ ಒಂದು ಪರಿಸ್ಥಿತಿ ಬಂದಿದೆ. ಇದು ಅಲ್ಲದೆ ಕರ್ನಾಟಕದಲ್ಲಿ ಬಾಂಬ್‌ಗಳ ಗಲಾಟೆಗಳು ಏನು? ಇದರ ಬಗ್ಗೆ ಬೆದರಿಕೆ ಏನೇನು ಇದೆ? ಇದಕ್ಕೆ ಸರ್ಕಾರ ಮಾಡಿರತಕ್ಕಂತಹ ವ್ಯವಸ್ಥೆ ಏನು? ನಮ್ಮ ಜನರಿಗೆ ನಂಬಿಕೆ ಬರತಕ್ಕಂತಹ ವ್ಯವಸ್ಥೆ ಯಾವ ರೀತಿ ಮಾಡಿದ್ದಾರೆ? ಅನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಏಕೆಂದರೆ ಇದು ಅತ್ಯಂತ ಗಂಭೀರವಾದಂತಹ ಪರಿಸ್ಥಿತಿ. ಈ ಸದನಕ್ಕೆ ಬಾಂಬ್‌ನ್ನು ಇಡುತ್ತೇವೆ ಎಂದು ಎಚ್ಚರಿಕೆಯನ್ನು ಕೊಡಬೇಕಾದರೆ, ಆ ಎಚ್ಚರಿಕೆ ಬಗ್ಗೆ ತನಿಖೆ ಏನಾಗಿದೆ. ಈ ಸುದ್ದಿ ಎಲ್ಲಿಂದ ಬಂತು? ಈ ದೂರವಾಣಿ ಕರೆ ಎಲ್ಲಿಂದ ಬಂತು? ಇದರ ತನಿಖೆ ಏನಾಗಿದೆ ಎನ್ನುವಂಥ ವರದಿಯನ್ನು ಸರ್ಕಾರ ಈ ಸದನದ ಮುಂದೆ ಮಂಡಿಸಬೇಕು. ಇಲ್ಲಿ ಅಂದು ಸದನ ನಡೆಯುವಾಗ ಇದೆಲ್ಲಾ ನಡೆದಿದೆ. ಇಷ್ಟಾದರೂ ಸಹ ಸದನದ ಮುಂದೆ ಸರ್ಕಾರ ಇದರ ಬಗ್ಗೆ ನಿನ್ನೆ ಒಂದು ಹೇಳಿಕೆಯನ್ನು ಕೊಡಲಿಲ್ಲ. ಇವತ್ತೂ ಸಹ ಸರ್ಕಾರ ಹೇಳಿಕೆಯನ್ನು ಕೊಟ್ಟಿಲ್ಲ. ಮತ್ತು ಇದರ ಜೊತೆಗೆ ಈವತ್ತು ಅನೇಕ ಕಡೆ ಭೂಕಂಪದ ಬಗ್ಗೆ ಒಂದು ಭೀಕರವಾದಂತಹ ಒಂದು ಪರಿಸ್ಥಿತಿ ಬರುತ್ತಿದೆ. ಇದು ಯಾವಕಾರಣದಿಂದ ಬರುತ್ತಿದೆ. ಇದರ ಬಗ್ಗೆ ಪಿತೂರಿ ಇದೆಯೇ ಅಥವಾ ತಮಗೆ ಗೊತ್ತಿರುವ ಹಾಗೆ ಬಾಂಬ್ ಮತ್ತು ಬೇರೆ ಕಡೆಯಿಂದ ಬಾಂಬ್‌ಗಳನ್ನು ವಾಹನದಲ್ಲಿ ತಗೆದುಕೊಂಡು ಕರ್ನಾಟಕದ ಗಡಿಯನ್ನು ದಾಟಿದ್ದಾರೆ ಎನ್ನುವಂತಹ ಸುದ್ದಿಗಳು ಬಂದಿವೆ. ಇದರ ಬಗ್ಗೆ ಸರ್ಕಾರ ಏನು ಮಾಡಿದೆ. ಮತ್ತು ಕರ್ನಾಟಕದಲ್ಲೂ ಸಹ ಭಯೋತ್ಪಾದಕರ ನೆಲೆಗಳು ಇದೆ ಎನ್ನುವಂತಹ ಪ್ರಶ್ನೆ ಬಂದಿದೆ. ಈ ಬಗ್ಗೆ ಏನು ಮಾಹಿತಿ ಇದೆ ಅದನ್ನು ಸರ್ಕಾರ ಈ ಸದನದ ಮುಂದೆ ಮಂಡಿಸಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ?

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) :- ಮಾನ್ಯ ಸಭಾಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ಸಮಸ್ಯೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ದಿವಸ ಬಜೆಟ್ ಮೇಲಿನ ಡಿಸ್‌ಕಷನ್‌ಗೆ ಉತ್ತರ ಕೊಡುವಾಗ ಸರ್ಕಾರ ಕೆಲವು ಕಾರ್ಯಕ್ರಮ ತೆಗೆದುಕೊಂಡ ಬಗ್ಗೆ ಹೇಳಿದ್ದಾರೆ. ಆದರೆ ಇವತ್ತು ಮೈಸೂರಿನಲ್ಲಿ ನಡೆದಿರುವುದು ಬಾಂಬ್ ಬ್ಲಾಸ್ಟ್ ಅಥವಾ ಭೂಕಂಪವೋ ಎಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ಹೇಳಿದ ಹಾಗೆ Mysterious blast cause panic in Mysore ಎಂದು ಇವತ್ತು ಪತ್ರಿಕೆಯಲ್ಲಿ ಬಂದಿದೆ. ಕೆಲವು ಜನ ಹೇಳುತ್ತಾರೆ ಅಲ್ಲಿ ಟಾಟಾ ಸ್ಟೀಲ್ ಕಂಪನಿ ಏನಿದೆ, ಇದು ಅಲ್ಲಿ ಆಗಿರಬಹುದು ಎನ್ನುವಂಥದ್ದು ಒಂದು ವಿಚಾರ.ಮತ್ತೊಂದು ಕಡೆ ಇದು ಬಾಂಬ್ ಬ್ಲಾಸ್ಟ್ ಆಗಿರಬಹುದು ಎಂದು ಮತ್ತೊಂದು ವಿಚಾರ ಇದೆ. ಹೀಗಾಗಿ ಇವತ್ತು ರಾಜ್ಯದ ಜನರಲ್ಲಿ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಈ ಸದನದ ವಿಶ್ವಾಸವನ್ನು ತೆಗೆದುಕೊಂಡು ರಾಜ್ಯದ ಜನತೆಗೆ ಮತ್ತು ಸದನಕ್ಕೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನೂ ಹೇಳಬೇಕಾಗುತ್ತದೆ.

ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಅದನ್ನು ಹೇಳುವುದಕ್ಕೆ ಭಯ ಬೇಡ. ಇವತ್ತು ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಸ್ಪಷ್ಟವಾಗಿ ಪಾಕಿಸ್ತಾನದ ಮೇಲೆ ಚಾರ್ಜ್ ಮಾಡಿದ್ದಾರೆ. ಆದುದರಿಂದ ನೀವು ಏನುಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ. ಇವತ್ತು ಮುಂಬಯಿ ಪ್ರದೇಶದ ಬಗ್ಗೆ ನಾನು ಹೇಳಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡರು. ಆದರೆ ಅವರು ಬಾಂಬೆಯಿಂದ ಹುಬ್ಬಳ್ಳಿ ತನಕ ಬರಬೇಕಾದರೆ ಅದಕ್ಕೆ ಲಿಂಕ್ ಇರಲೇಬೇಕು. ಅದೇ ಪ್ರಕಾರ ನಾನು ಹೇಳಿದೆ, 1992ನೇ ಇಸವಿಯಲ್ಲಿ ಅಧ್ಯಕ್ಷರೇ, ಏನಾಯಿತೆಂದು ಗೊತ್ತು. ಬೆಳಗಾಂನಲ್ಲಿ ಪೋರ್ಟ್‌ರೋಡ್ ಹಿಂದೆ ಏನು ಒಂದು ಓಣಿ ಇದೆ. ಅಲ್ಲಿ ಒಂದು ಮನೆಯಲ್ಲಿ ಬಾಂಬ್ ಬ್ಲಾಸ್ಟ್ ಆಯಿತು. ಅಲ್ಲಿ ಮನೆಯಲ್ಲಿದ್ದ ಎರಡು ಮೂರು ಜನ ಇನ್‌ಜ್ಯೂರ್ಡ್ ಆದರು; ಅವರಿಗೆ ನಾವು ಕಾಂಪನ್‌ಶೇಷನ್ ಕೊಟ್ಟಿದ್ದೇವೆ. ಇದಕ್ಕೆ ನಾವು ತಲೆ ತಗ್ಗಿಸಬೇಕು. ಯಾವ ಮನೆಯಲ್ಲಿ ಬಾಂಬ್ ಬ್ಲಾಸ್ಟ್ ಆಯಿತು ಎಂಬುದರ ಬಗ್ಗೆ ಸರ್ಕಾರದಿಂದ ಏನೂ ಹೇಳಿಕೆ ಬರಲಿಲ್ಲ. ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನೂ ಹೇಳಲಿಲ್ಲ. ಹೀಗಾದರೆ ಜನರಲ್ಲಿ ಯಾವ ರೀತಿಯ ಕಾನ್‌ಫಿಡೆನ್ಸ್ ಬರುತ್ತದೆ? ಪೋಲೀಸ್ ಕಛೇರಿ ಏನು ಮಾಡುತ್ತಿದೆ? ಇಂಟೆಲಿಜೆನ್ಸ್ ಏನು ಮಾಡುತ್ತಿದೆ? ಇದು ನಮಗೆ ಗೊತ್ತಾಗಬೇಕಾಗುತ್ತದೆ. ಒಂದು ವರ್ಷದ ಹಿಂದೆ ಆದ ಬಾಂಬ್ ಬ್ಲಾಸ್ಟ್ ಬಗ್ಗೆ ನಮಗೆ ಗೊತ್ತಾಗುತ್ತಿಲ್ಲ. ಇವತ್ತು ಯಾವ ಪ್ರಕಾರ ಸರ್ಕಾರ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳಬೇಕು. ಮತ್ತೊಂದು ಸುದ್ದಿ ಇದೆ TIMES OF INDIA Dt: 31-3-1993 "An eight years old girl maina died on the spot when an unidentified round object which she put into her mouth exploded on Saturday in Narasimharajapura Police limits in Chikamagalur district. According to the reports reaching late here, the mishap occurred in the evening as she was driving the cattle back home along with her grandmother in a paddy field, where she found the object. The Police said it might have been an explosive placed to prevent wild animals from entering the fields. It is likely to be a bomb blast also. ಚಿಕ್ಕಮಗಳೂರಿನಲ್ಲಿ ಆಗುತ್ತಿದೆ, ಮೈಸೂರಿನಲ್ಲಿ ಆಗುತ್ತಾ ಇದೆ. ಇದರ ಬಗ್ಗೆ ಸರ್ಕಾರದಿಂದ ಯಾವ ಸ್ಪಷ್ಟೀಕರಣ ಬರುತ್ತಾ ಇಲ್ಲ. ಹಾಗಾಗಿ ನಾಡಿನ ಜನರಲ್ಲಿ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ನಾಳೆ ಮತ್ತೊಬ್ಬರು ಫೋನ್ ಮಾಡಬಹುದು. ಆಸೆಂಬ್ಲಿಯಲ್ಲಿ ಬಾಂಬ್ ಇಟ್ಟಿದ್ದೇವೆ ಎಂದು ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಇದೂ ಸಹ ಆಗಬಹುದು. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ನಾವು ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ಹೇಳಬೇಕಾಗುತ್ತದೆ. ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಬೆಳಗಾಂ ಬಾಂಬ್ ಬ್ಲಾಸ್ಟ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮೈಸೂರು, ಚಿಕ್ಕಮಗಳೂರು ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ನಮಗೆ ಗೊತ್ತಾಗಬೇಕಾಗುತ್ತದೆ. ಇವತ್ತು ಬಾಂಬ್ ಬ್ಲಾಸ್ಟ್ ಆಗಿಲ್ಲ ಎಂದರೆ ಅರ್ಥ ಬಾಂಬ್ಸ್ ಅಥವಾ ಮೆಟೀರಿಯಲ್ಸ್ ಬಂದಿಲ್ಲ ಎಂದಲ್ಲ. ನಮ್ಮನ್ನು ಅವರು ಕೇಳಿ ಮಾಡುವುದಿಲ್ಲ. ಮೋಡಸ್ ಆಪರೇಟೀವ್ ಸಹ ನಮ್ಮನ್ನು ಕೇಳಿ ಆಪರೇಟ್ ಮಾಡುವುದಿಲ್ಲ. ಹಾಗಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ನಿಮ್ಮ ಇಂಟೆಲಿಜೆನ್ಸ್‌ನಿಂದ ಏನು ಇನ್‌ಫರ್ಮೇಷನ್ ಬಂದಿದೆ? ಅದು ಎಲ್ಲಾ ಹೇಳುವುದಕ್ಕೆ ಆಗದಿದ್ದರೂ ಸಹ ಜನರಲ್ಲಿ ವಿಶ್ವಾಸ ಮೂಡಿಸಲಿಕ್ಕೆ, ಜನರಲ್ಲಿ ಏನು ಭಯ ಇದೆ ಅದನ್ನು ಪರಿಹಾರ ಮಾಡುವ ದೃಷ್ಟಿಯಿಂದ ನಾವು ಇಂತಹ ಕ್ರಮ ತೆಗೆದುಕೊಂಡಿದ್ದೇವೆ ಎಂಬ ಮಾತು ಮುಖ್ಯಮಂತ್ರಿಗಳ ಕಡೆಯಿಂದ ಬರಬೇಕಾಗುತ್ತದೆ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ತರುತ್ತಿದ್ದೇನೆ. ಇವತ್ತು ಸದನ ಮುಗಿಯುವುದಕ್ಕೆ ಮುಂಚೆ ಅದರ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :- ಸರ್ಕಾರದ ಪರವಾಗಿ ತಾವು ಏನಾದರೂ ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರ ತಣ್ಣಗೆ ಇದೆ.

ಶ್ರೀ ಪಿ.ಸಿ. ಸಿದ್ದನಗೌಡರ್ :- ಸರ್ಕಾರ ಇಲ್ಲವೇ ಇಲ್ಲವಲ್ಲ ! ಯಾರೂ ಇಲ್ಲ.

(ಗೊಂದಲ)

ಅಧ್ಯಕ್ಷರು :- ಪರಿಸರ ಮಂತ್ರಿಗಳು ಹೇಳುತ್ತಾರೆ. ತಾವು ಕೇಳಿ.

ಶ್ರೀ ವಾಟಾಳ್ ನಾಗರಾಜ್ :- ಪರಿಸರ ಮಂತ್ರಿಗಳು ಬಾಂಬ್ ಬಗ್ಗೆ ಹೇಳುತ್ತಾರೆಯೇ?

ಅಧ್ಯಕ್ಷರು :- ಇಲ್ಲ ನೀವು ಅವರ ಬಾಂಬ್ ನೋಡಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ತಮಗೆ ಹೇಳುತ್ತೇನೆ, ಅವರು ಪರಿಸರದ ಮಂತ್ರಿಗಳು, ಪರಿಸರದ್ದು ಹೇಳುತ್ತಾರೆ, ಅದಕ್ಕೋಸ್ಕರ....

Sri N.G. Halappa :- The Government will take note of the concern expressed by the Hon'ble Members. ಸರ್ಕಾರ ಅದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತದೆ. ಆದರೆ ಬಾಂಬ್ ಆರ್ತ್ ಕ್ವೇಕ್ ನಮ್ಮ ಡಿಪಾರ್ಟ್‌ಮೆಂಟಿಗೆ ಬರುವುದಿಲ್ಲ. But I assure the Hon'ble Members that what part this Department could play, is played. I will instruct my officers to go and verify.

ಶ್ರೀ ಎಂ.ಪಿ. ವೆಂಕಟೇಶ್ :- ಇಂತಿಂಥ ವಿಧಿಯಾಕ್ಕೆ ಬಂದಿದೆ ಏನು ಎಂದರೆ ಅಪರು ನಮಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಹಿಂದೆ ಮಾನ್ಯ ಬಸವಲಿಂಗಪ್ಪನವರು ಇದ್ದಾಗ ಇದನ್ನು ತನಿಖೆ ಮಾಡಿಸಿದರು, ನೋಟೀಸ್ ಕಳುಹಿಸಿದರು. ಮಾನ್ಯ ಸಚಿವರಿಗೆ ಗೊತ್ತಿಲ್ಲ ಎಂದರೆ ಹೇಗೆ?

(ಗೊಂದಲ)

Sri R.V. Deshpande :- This is a serious matter. Somebody should get up and say it.

ಶ್ರೀ ಭೀಮಣ್ಣ ಖಂಡ್ರೆ :- ಇನ್‌ಫರ್ಮೇಷನ್ ತರಿಸಿ ಕೊಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :- ಯಾವಾಗ ತರಿಸಿಕೊಡುತ್ತೀರಿ ಸ್ವಾಮಿ?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :- ಯಾವಾಗ ಕೊಡುತ್ತೀರಿ ಸ್ವಾಮಿ? ಸಭಾಧ್ಯಕ್ಷರೇ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು :- ಅವರು ಹೇಳುವುದನ್ನು ಕೇಳಿ.

ಶ್ರೀ ಹೆಚ್. ಏಕಾಂತಯ್ಯ :- ಅವರು ಹೇಳುವುದನ್ನು ಕೇಳಬಹುದು, ನಮಗೆ ಅರ್ಥ ಆಗಬೇಕಲ್ಲಾ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ ಒಂದು ವಿಷಯ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಪರಿಸರ ಸಚಿವರು ಬಹಳ ಬುದ್ಧಿವಂತಿಕೆಯಿಂದ ತಮ್ಮ ಇಲಾಖೆಯನ್ನುವರ್ಗ ಮಾಡಿ ನಮಗೆ ಸಂಬಂಧ ಇಲ್ಲ ಎಂದು ಹೇಳಿ ಕೈತೊಳೆದು ಕುಳಿತುಕೊಂಡರು, ನಶ್ಯ ಹಿಡಿದುಕೊಂಡು ಕುಳಿತುಬಿಟ್ಟರು.

Sri N.G. Halappa :- How are we concerned with this?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ತಮ್ಮ ಬಗ್ಗೆ ನನಗೆ ಗೌರವ ಇದೆ. ಮಾನ್ಯ ಸಾರಿಗೆ ಸಚಿವರು ಎದ್ದರು. ಇದು ನಮಗೆ ಸಂಬಂಧವಿಲ್ಲ ಬೇರೆಯವರು ಬರುತ್ತಾರೆ ಎಂದು ಅವರು ಕೈತೊಳೆದು ಕುಳಿತರು.

ಶ್ರೀ ಭೀಮಣ್ಣ ಖಂಡ್ರೆ :- ಸರ್ಕಾರಕ್ಕೆ ಸಂಬಂಧಪಟ್ಟಿದ್ದುದು ಇದೆ. ಇನ್‌ಫರ್ಮೇಷನ್ ತರಿಸಿಕೊಂಡು ನಿಮ್ಮ ಮುಂದೆ ಇಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಅದೇ ನಾನು ತಮಗೆ ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್ :- ಇವತ್ತು ಸದನ ನಡೆಯುತ್ತಿದೆ. ಅಲ್ಲಿಯವರೆಲ್ಲಾ ಬೆಂಗಳೂರಿಗೆ ಓಡಿ ಬರುತ್ತಿದ್ದಾರೆ. ಯಾವಾಗ ಮಾಹಿತಿ ತರಿಸಿಕೊಡುತ್ತಾರೆ ಸ್ವಾಮಿ?

ಅಧ್ಯಕ್ಷರು :- ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :- ಸದನದಲ್ಲಿ ಮಂತ್ರಿಗಳು ಉತ್ತರ ಕೊಟ್ಟರೆ ಪತ್ರಿಕೆಗಳಲ್ಲಿ ಬರುತ್ತದೆ, ಆಗ ಜನಕ್ಕೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ್ ಗೌಡ :- ಸರ್ಕಾರದ ಮಂತ್ರಿಯವರು ಮಾಹಿತಿ ತರಿಸುತ್ತೇನೆ ಎಂದು ಹೇಳಿದ್ದಾರೆ. ತಮ್ಮ ಗಮನಕ್ಕೆ ತರುವಾದಾದರೆ ನಿನ್ನೆ ಕಾರ್ಡಿಯಾಕ್ ಅರೆಸ್ಟ್ ಎಷ್ಟೋ ಜನಕ್ಕೆ ಆಗಿದೆ. ಬರೀ ಗಾಬರಿ ಅಲ್ಲ. ಭಯಬಿದ್ದು ಎಷ್ಟೋಜನ ಸತ್ತೇ ಹೋಗಿದ್ದಾರೆ. ಆ ತರಹ ಆಗಿದೆ.

ಶ್ರೀ ಎಂ.ಪಿ. ವೆಂಕಟೇಶ್ :- ಹಂಪನಗೌಡರ ಮನೆ ಹೆಂಗಸರು ಫೋನ್ ಮಾಡಿದ್ದಾರೆ. ಬಹಳ ಗಾಬರಿ ಆಗಿದೆ.

(ಗೊಂದಲ)

ಶ್ರೀ ಕೆ. ಹರ್ಷಕುಮಾರಗೌಡ :- ಇದರ ಗಂಭೀರತೆಯನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನೀವು ಇದರ ಬಗ್ಗೆ ಮಾಹಿತಿ ತರಿಸುತ್ತೀರಿ, ನಾಳೆ ಈ ಕುರಿತು ಒಂದು ಹೇಳಿಕೆ ಕೊಡಿಸುತ್ತೀರಿ, ಅದು ಬೇರೆ ಪ್ರಶ್ನೆ. ಇವೊತ್ತು ನಗರದ ಜನತೆಯ ರಕ್ಷಣೆಯ ಜವಾಬ್ದಾರಿಯನ್ನು ಯಾರು ಹೊತ್ತಿರುವವರಿದ್ದಾರೆ. ಅವರು ನಾವು ನಾಳೆ ಹೇಳುತ್ತೇವೆ, ನಾಳಿದ್ದು ಹೇಳುತ್ತೇವೆ, ನಿಧಾನವಾಗಿ ಹೇಳುತ್ತೇವ ಎಂದರೆ ಜನ ಕೇಳುವುದಿಲ್ಲ. ಇದರ ಬಗ್ಗೆ ಸರ್ಕಾರ ಏನು ಉತ್ತರ ಕೊಡುತ್ತದೆ? ಏನು ಮಾರ್ಗದರ್ಶನ ಕೊಡುತ್ತದೆ? ನಮಗೆ ಇದರಿಂದ ಏನು ರಕ್ಷಣೆ ಕೊಡುತ್ತದೆ ಎಂಬುದನ್ನು ಹೇಳಿ ಎಂದು ಜನ ಕೇಳುತ್ತಾರೆ. ಇದರಲ್ಲಿ ತಮ್ಮ ಜವಾಬ್ದಾರಿಯನ್ನು ನಾನು ಕೇಳುತ್ತಿದ್ದೇನೆ.' ನಾಳೆ ಇದರ ಬಗ್ಗೆ ಉತ್ತರ ಹೇಳುತ್ತೇನೆ' ಎಂದು ಮಂತ್ರಿಗಳು ಸದನದಲ್ಲಿ ಹೇಳಿದರೆ ಜನರು ನಂಬುತ್ತಾರೆಯೇ? ನಮ್ಮನ್ನು ಹಾಸ್ಯ ಮಾಡುವುದಿಲ್ಲವೇ?ಆದುದರಿಂದ, ನಾನು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ, ಇವೊತ್ತು ಸಂಜೆಯೊಳಗಾಗಿ ಇದರ ಬಗ್ಗೆ ಹೇಳಿಕೆಯನ್ನು ನೀಡಿ; ಇದು ಬಾಂಬ್ ಸ್ಫೋಟವೇ? ಇಲ್ಲವೇ ಇದು ಭೂಕಂಪವೇ ಅಥವಾ ಇದರಲ್ಲಿ ಯಾರಾದರೂ ಕೈವಾಡವಿದೆಯೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಇವೊತ್ತು ಸಂಜೆ 5 ಗಂಟೆಗೆ ಮೈಸೂರು ನಗರದಲ್ಲಿ ಮತ್ತೆ ಇದೇ ತರಹದ ಘಟನೆ

ನಡೆಯಬಹುದು, ನಾಳೆಯೂ ನಡೆಯಬಹುದು. ಜೊತೆಗೆ, ಈಗಾಗಲೇ ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಬಾಂಬ್‌ಗೋಸ್ಕರ ಎಲ್ಲಾಕಡೆ ತಪಾಸಣೆ ಮಾಡಲಾಗುತ್ತಿದೆ, ವಾಹನಗಳನ್ನು ತಪಾಸಣೆ ನಡೆಸಲಾಗುತ್ತಿದೆ. ಅದೇ ರೀತಿ ವಾಹನಗಳನ್ನು ತೆಗೆದುಕೊಂಡು ಹೋಗಿ ಒಂದು ಕಡೆ ಬಾಂಬ್ ಬ್ಲಾಸ್ಟ್ ಸಿಕೆ ಮಾಡಿರಬಾರದು? ಆದುದರಿಂದ, ಜನರಿಗೆ ಸಮಾಧಾನ ಹಾಗೂ ಶಾಂತಿ ತರುವ ಜವಾಬ್ದಾರಿ ಕೆಲಸವನ್ನು ತತ್‌ಕ್ಷಣದಿಂದ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

(3) ರೇವಜೀತು ಪ್ರಕರಣದ ಬಗ್ಗೆ ಸುಪ್ರೀಂಕೋರ್ಟಿನ ತೀರ್ಮಾನ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :- ಮಾನ್ಯ ಅಧ್ಯಕ್ಷರೇ ರಾಷ್ಟ್ರದ ಸುಪ್ರೀಂ ಕೋರ್ಟ್ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದ ರೇವಜಿತು ಡೀಲ್ ಆರ್ಡರ್ಸ್ ಅನ್ನು ಕ್ವಾಷ್ ಮಾಡಿದೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಮುಖ್ಯವಾದ ವಿಷಯವಾಗಿದೆ. ಆದರ ವಿಷಯವಾಗಿ ನಾನು ತಮ್ಮ ಮುಂದೆ ಪ್ರಸ್ತಾಪಿಸುವುದಕ್ಕೆ ಇಚ್ಛಿಪಡುತ್ತೇನೆ. ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ....

ಶ್ರೀ ಆರ್.ವಿ. ದೇಶಪಾಂಡೆ :- ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಯಾವ ನಿಯಮದ ಕೆಳಗೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ? ಯಾವುದರ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆಂಬುದು ಗೊತ್ತಾಗಬೇಕು. ಒಂದು ವೇಳೆ ಸದನದ ಸದಸ್ಯರ ಬಗ್ಗೆ ಪ್ರಸ್ತಾಪ ಮಾಡುವಪರಿದ್ದರೆ ತಮಗೆ ಮುಂಚಿತವಾಗಿ ನೋಟೀಸ್ ಕೊಡಬೇಕು. ನೋಟೀಸ್ ಕೊಟ್ಟ ನಂತರ ಪ್ರಸ್ತಾಪ ಮಾಡುವ ಅಧಿಕಾರ ಅವರಿಗೆ ಇದೆ. ಆದರೆ, ಅವರು ನೋಟೀಸ್ ಕೊಡದೆ ಸದನದ ಸದಸ್ಯರ ಬಗ್ಗೆ ಪ್ರಸ್ತಾಪಿಸಿದರೆ, ಮಾನ್ಯ ಅಧ್ಯಕ್ಷರು ಅದನ್ನು ಅಲೋ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ :- ಸನ್ಮಾನ್ಯ ಅಧ್ಯಕ್ಷರೇ, ನಾನು ಯಾವ ಸದಸ್ಯರ ವಿಷಯವಾಗಿಯೂ ಪ್ರಸ್ತಾಪ ಮಾಡಲಿಲ್ಲ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಹಿಂದೆ ಏನು ಕೆಲವು ತೀರ್ಮಾನಗಳನ್ನು ಮಾಡಿತ್ತು. ಆ ತೀರ್ಮಾನಗಳನ್ನು ಸುಪ್ರೀಂ ಕೋರ್ಟ್ ಕ್ವಾಷ್ ಮಾಡಿದೆ. ಆ ರೀತಿ ಕ್ವಾಷ್ ಮಾಡಿದ ಕಾರಣ ಆಗುವಂಥ ಪರಿಣಾಮಗಳೇನು ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ನಾನು ತಮ್ಮ ಮುಂದೆ ನಿಂತಿದ್ದೇನೆ. ಈ ವಿಷಯವಾಗಿ ನಾನು ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕೆಂದಿದ್ದೆ. ಸುಪ್ರೀಂ ಕೋರ್ಟ್ ತೀರ್ಪು ಏನಿದೆ, ಅದರ ಹಿಂದೆ ಆಗಿರುವ ಒಂದು ವಿವಾದದ ವಿಷಯವಾಗಿ ನಮ್ಮ ರಾಜ್ಯ ಸರ್ಕಾರದ ವಿಷಯದಲ್ಲಿ ತೊಂದರೆಯಾಗುತ್ತಿದೆ, ಜನತೆಗೂ ನಷ್ಟವಾಗುತ್ತಿದೆ, ನಮ್ಮ ಸರ್ಕಾರಕ್ಕೆ ಆಗಿರುವ ನಷ್ಟವನ್ನು ತಾವು ಸರಿಪಡಿಸಿಕೊಡಬೇಕಾಗಿದೆ ...

ಅಧ್ಯಕ್ಷರು :- ಇದರ ಬಗ್ಗೆ ಪ್ರಸ್ತಾಪಿಸಲು ಅವಕಾಶವಿಲ್ಲ. ಈಗ ಸದನದ ಕಾರ್ಯಕಲಾಪವನ್ನು ಮುಂದೂಡಿ ಮತ್ತೆ ಮಧ್ಯಾಹ್ನ 2-15 ಗಂಟೆಗೆ ಸೇರುವುದು.

(ಸದನವು 1 ಗಂಟೆ 15 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಮಧ್ಯಾಹ್ನ 2 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಸದನವು ಪುನಃ 2-40ಕ್ಕೆ ಸಮಾವೇಶಗೊಂಡಿತು.